**ದಿನಾಂಕ 17.07.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- 2 ರಿಂದ 5ನೇ ಪ್ರತಿವಾದಿಗಳ ಪರ ವಕೀಲರಿಂದಃ**

ಈ ದಾವೆಯನ್ನು ಭಾಗಾಂಶ ಕೋರಿ ಸಲ್ಲಿಸಿರುತ್ತೇವೆ. ದಿಃ31.03.2003 ರಂದು 1ನೇ ಪ್ರತಿವಾದಿ ತಮ್ಮ ಕುಟುಂಬ ನಿರ್ವಹಣೆಗಾಗಿ ದಾವಾ ಎ ಆಸ್ತಿಯ ಪೈಕಿ 40 ಸೆಂಟ್ ಆಸ್ತಿಯನ್ನು 5ನೇ ಪ್ರತಿವಾದಿ ಶಾಲೆಗೆ ಕ್ರಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯದ ಸಂದರ್ಭದಲ್ಲಿ ಎಲ್ಲಪ್ಪ, ಪಳನೀಶೆಟ್ಟಿ, ಸಿದ್ದರಾಜು, ಮಹದೇವನಾಯಕ,ದೊಡ್ಡೇಗೌಡ , ಮುರುಗೇಶ, ನಾಗರಾಜು, ಮಾದಪ್ಪ , ಬಸಪ್ಪ , ಪಳನಿಸ್ವಾಮಿ , ಗೋವಿಂದನಾಯಕ ಮತ್ತು ಕಂದಸ್ವಾಮಿರವರು ಹಾಜರಿದ್ದು ಸದರಿ ಕ್ರಯಕ್ಕೆ ಸಾಕ್ಷಿಗಳಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರಸ್ತುತ ದಾವಾ ಎ ಅಸ್ತಿಯ ಪೈಕಿ 40 ಸೆಂಟ್ ಜಮೀನಿನಲ್ಲಿ 5ನೇ ಪ್ರತಿವಾದಿಯ ಶಾಲೆ ನಡೆಯುತ್ತಿದೆ ಎಂದರೆ ಸಾಕ್ಷಿಯು 2002 ನೇ ಸಾಲಿನಲ್ಲಿ 5ನೇ ಪ್ರತಿವಾದಿಯ ಶಾಲೆಯವರು 1ನೇ ಪ್ರತಿವಾದಿಯ ಬಳಿ ಶಾಲೆಗಾಗಿ ಜಾಗ ಕೇಳಿದಾಗ ಮಕ್ಕಳಿಗಾಗಿ ಶಾಲೆಯನ್ನು ನಿರ್ಮಿಸಿಕೊಳ್ಳಿ ನಿಮ್ಮ ಹಳೆಯ ಶಾಲೆ ರಿಪೇರಿ ಆದ ಮೇಲೆ ವಾಪಸ್ಸು ಬಿಟ್ಟುಕೊಡಿ ಎಂದು ಹೇಳಿ 1ನೇ ಪ್ರತಿವಾದಿ ಶಾಲೆಯನ್ನು ನಿರ್ಮಿಸಿಕೊಳ್ಳಲು ಅನುಮತಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ 40 ಸೆಂಟ್ ಜಮೀನಿನ ಖಾತೆಯು 5ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಈ ದಾವೆ ಸಲ್ಲಿಸಿದ ನಂತರ ನನಗೆ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ.

ಸದರಿ 40 ಸೆಂಟ್ ಜಮೀನಿನಲ್ಲಿ ಶಾಲೆ ನಡೆಯುತ್ತಿದೆ ಎಂದರೆ ಸರಿ . ಸದರಿ ಶಾಲೆಗೆ 1ನೇ ಪ್ರತಿವಾದಿ ಎಸ್ ಡಿ ಎಂ ಎಸ್ ಅಧ್ಯಕ್ಷರು ಆಗಿದ್ದರು ಎಂದರೆ ಸರಿ . 1ನೇ ಪ್ರತಿವಾದಿ ಎಸ್ ಡಿ ಎಂ ಎಸ್ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಶಾಲಾ ಕಟ್ಟಡ ನಿರ್ಮಾಣವನ್ನು 1ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಶಾಲಾ ಕಟ್ಟಡ ನಿರ್ಮಾಣ ಸಮಯದಲ್ಲಿ 1ನೇ ವಾದಿ ಹಾಗೂ 1ನೇ ಪ್ರತಿವಾದಿ ತಕರಾರು ಮಾಡಿರುವುದಿಲ್ಲ ಎಂದರೆ ಸರಿ . 2002 ನೇ ಸಾಲಿನಿಂದ ಇಲ್ಲಿಯವರೆಗೆ ಶಾಲೆ ನಡೆಯುತ್ತಿದೆ ಎಂದರೆ ಸರಿ . ದಾವಾ ಎ ಆಸ್ತಿಯ ಪೈಕಿ 40 ಸೆಂಟ್ ಜಮೀನಿಗೆ ಸಂಬಂಧಿಸಿದಂತೆ ನಮಗೆ ಯಾವುದೇ ಹಕ್ಕು ಅಧಿಕಾರ ಇಲ್ಲದೆ ಇದ್ದರು ಸದರಿ

ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಪ್ರತಿವಾದಿ 2 ರಿಂದ 5 ರವರ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಪೂರ್ವದಲ್ಲಿ ಪ್ರತಿವಾದಿ 2 ರಿಂದ 5 ರವರಿಗೆ ನೋಟೀಸ್ ನೀಡಿರುವುದಿಲ್ಲ ಎಂದರೆ ಸರಿ .

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾದಂ., ಕೊಳ್ಳೇಗಾಲ**

**ಓ .ಎಸ್ . ನಂ.** **ಪಿಡಬ್ಲ್ಯೂ: 1**

**ದಿನಾಂಕ 01.06.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- ಶ್ರೀ ಪ್ರತಿವಾದಿ ಪರ ವಕೀಲರಿಂದಃ**

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ